# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಪ್ರಕಟಣೆ

ದಿನಾಂಕಃ 15.03.2021.

ವಿಷಯ : ಗದಗ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಲಾಯರ್ಸ್ ಚೆಂಬರ್ ಕಟ್ಟಡದಲ್ಲಿರುವ 6 ಮಳಿಗೆಗಳನ್ನು ಲೈಸನ್ಸ್ ಶುಲ್ಕದಿಂದ ನಡೆಸಲು ಅರ್ಜಿ ಸಲ್ಲಿಸುವ ಕುರಿತು.

ಉಲ್ಲೇಖಃ ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು ಇವರ ಸಾಮಾನ್ಯ ಸುತ್ತೋಲೆ ಸಂಖ್ಯೆಃ LCA.I 200/2009 ದಿನಾಂಕ 13.06.2005.

-0-

ಗದಗ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ "ಲಾಯರ್ಸ್ ಚೆಂಬರ್" ಕಟ್ಟಡದಲ್ಲಿರುವ ಈ ಕೆಳಗೆ ವಿವರಿಸಿರುವ 6 ಮಳಿಗೆಗಳನ್ನು ಲೈಸನ್ಸ್ ನಾತೆಯಿಂದ ಜಾಬ್ ಟೈಪಿಂಗ್, ಜರಾಕ್ಸ್, ಎಸ್‌ಟಿಡಿ ಬೂತ್ ಮತ್ತು ಮಿಲ್ಕ್ ಬೂತ್ ಮುಂತಾದವುಗಳಿಗೆ ಈ ಕೆಳಗೆ ಹೇಳಿರುವ ಷರತ್ತು, ನಿಬಂಧನೆಗಳಿಗೆ ಒಳಪಟ್ಟು ನೀಡಲು ಉದ್ದೇಶಿಸಿದ್ದು, ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವವರು ಸ್ವ ರಚಿತ ಅರ್ಜಿಯಲ್ಲಿ ತಮ್ಮ ಸಂಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆ ನಮೂದಿಸಿದ ಅರ್ಜಿಯನ್ನು ಯಾವ ಸಂಖ್ಯೆಯ ಮಳಿಗೆಗೆ ಅರ್ಜಿ ಸಲ್ಲಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹುಬ್ಬಳ್ಳಿ ರೋಡ, ಗದಗ ಈ ವಿಳಾಸಕ್ಕೆ ದಿನಾಂಕ 31-03-2021 ರ ಸಾಯಂಕಾಲ 04.30 ಘಂಟೆಯ ಒಳಗಾಗಿ ಖುದ್ದಾಗಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

## ಮಳಿಗೆಗಳ ವಿವರಣೆ

| ಕ್ರಮ ಸಂಖ್ಯೆ. | ಮಳಿಗೆಯ ಸಂಖ್ಯೆ. | ವಿಸ್ತೀರ್ಣ ಅಡಿಗಳಲ್ಲಿ | ಲೈಸನ್ಸ್ ಶುಲ್ಕ ತಿಂಗಳಿಗೆ |
|---|---|---|---|
| 1 | 2 | 9.25 x 10.6 | 1550-00 |
| 2 | 5 | 8.00 x 7.50 | 960-00 |
| 3 | 6 | 8.00 x 7.50 | 960-00 |
| 4 | 9 | 8.00 x 7.50 | 960-00 |
| 5 | 10 | 8.00 x 7.50 | 960-00 |
| 6 | 12 | 8.00 x 10.00 | 1275-00 |

## ಷರತ್ತು ಮತ್ತು ನಿಬಂಧನೆಗಳು :

1. ಮಳಿಗೆ ಮಂಜೂರಾತಿಯು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಗದಗ ಇವರ ವಿವೇಚನಾ ಅಧಿಕಾರಕ್ಕೆ ಒಳಪಟ್ಟಿರುತ್ತದೆ.
2. ಅರ್ಜಿದಾರರು ಮಳಿಗೆ ಮಂಜೂರಾತಿ ಸೂಚನೆ ಅಂಚೆ ಮೂಲಕ ಸ್ವೀಕೃತಿಯಾದ ಮೂರು ದಿನಗಳ ಒಳಗೆ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಗದಗ ಇವರ ಹುದ್ದೆಯ ಹೆಸರಿಗೆ ಈ ಕಚೇರಿಯಲ್ಲಿ ಮೂರು ವರ್ಷಗಳ ಅವಧಿಗೆ ಒಪ್ಪಂದ ಪತ್ರವನ್ನು ಮಾಡಿಕೊಳ್ಳಬೇಕು.
3. ಮಳಿಗೆ ಮಂಜೂರಾತಿ ಪಡೆದ ಅರ್ಜಿದಾರರು ಸ್ಟಾಂಪ್ ಅಳತೆಯ ಎರಡು ಭಾವಚಿತ್ರಗಳನ್ನು, ಆಧಾರ್ ಅಥವಾ ಮತದಾರರ ಚೀಟಿಯ ಪ್ರತಿಯನ್ನು ಒದಗಿಸಬೇಕು.
4. ಮಳಿಗೆ ಮಂಜೂರಾತಿ ಪಡೆದ ಅರ್ಜಿದಾರರು ಮಳಿಗೆಯನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದಕ್ಕಾಗಿ ಮಳಿಗೆಯಲ್ಲಿ ನಡೆಸುವ ವ್ಯಾಪಾರಕ್ಕಾಗಿ ಲೈಸನ್ಸ್ ಮುನ್ಸಿಪಾಲಿಟಿ ಅಥವಾ ಯಾವುದೇ ಅಧಿಕಾರಿಗಳಿಂದ ಪಡೆಯುವುದು ಅವಶ್ಯವಿದ್ದಲ್ಲಿ ಅದನ್ನು ಪಡೆದಿರಬೇಕು.
5. ಮಳಿಗೆ ಮಂಜೂರಾತಿ ಪಡೆದ ಅರ್ಜಿದಾರರು ಭದ್ರತಾ ಠೇವಣಿಯಾಗಿ ರೂ.10,000/- (ರೂ. ಹತ್ತು ಸಾವಿರ) ಮೌಲ್ಯದ ಡಿ.ಡಿ. ಯನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಗದಗ ಇವರ ಹೆಸರಿನಲ್ಲಿ ಅಗ್ರಿಮೆಂಟ್ ಮಾಡಿಕೊಳ್ಳುವ ಕಾಲಕ್ಕೆ ಸಲ್ಲಿಸಬೇಕು. ಭದ್ರತಾ ಠೇವಣಿ ಹಣಕ್ಕೆ ಬಡ್ಡಿ ಕೊಡಲಾಗುವುದಿಲ್ಲ.
6. ಮಳಿಗೆ ಮಂಜೂರಾತಿ ಪಡೆದ ಅರ್ಜಿದಾರರು ಮಂಜೂರಾದ ಮಳಿಗೆಯ ಪ್ರತ್ಯೇಕವಾದ ಮೀಟರಿನ ರೀಡಿಂಗ್ ಅನ್ವಯ ಮಾಸಿಕ ವಿದ್ಯುತ್ ಬಿಲ್ಲನ್ನು ಹಾಗೂ ತ್ಯಾಜ್ಯ ವಿಲೇವಾರಿ ವೆಚ್ಚವನ್ನು ತಾವೇ ಭರಿಸಬೇಕು.
7. ಮಳಿಗೆ ಮಂಜೂರಾತಿ ಪಡೆದ ಅರ್ಜಿದಾರರು ತಮ್ಮ ವ್ಯವಹಾರಕ್ಕೆ ಅಗತ್ಯವಾದ ನೀರಿನ ವ್ಯವಸ್ಥೆಯನ್ನು ತಮ್ಮ ಖರ್ಚಿನಲ್ಲಿ ತಾವೇ ಮಾಡಿಕೊಳ್ಳತಕ್ಕದ್ದು .
8. ಮಳಿಗೆ ಮಂಜೂರಾತಿ ಪಡೆದ ಅರ್ಜಿದಾರರು ಮಂಜೂರಾದ ಮಳಿಗೆಯನ್ನು ಸ್ವಚ್ಛವಾಗಿ, ಶಿಸ್ತಾಗಿ ಇಟ್ಟುಕೊಳ್ಳತಕ್ಕದ್ದು ಹಾಗೂ ಸುತ್ತ ಮುತ್ತಲಿನ ಪರಿಸರ, ನೈರ್ಮಲ್ಯ ಕಾಪಾಡಿಕೊಳ್ಳತಕ್ಕದ್ದು.
9. ಮಳಿಗೆ ಮಂಜೂರಾದವರು ಮಳಿಗೆಯನ್ನು ಬೇರೆಯವರಿಗೆ ಉಪ ಬಾಡಿಗೆ ಹಾಗೂ ಪರಬಾರೆ ಮಾಡುವುದನ್ನು ನಿಷೇಧಿಸಿದೆ.
10. ಮಳಿಗೆ ಮಂಜೂರಾದವರು ಮಳಿಗೆಯನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸಬೇಕು. ಅನ್ಯ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.
11. ಮಳಿಗೆ ಮಂಜೂರಾದವರು ಮಳಿಗೆಯನ್ನು ಬೆಳಿಗ್ಗೆ 7-00 ಗಂಟೆಯಿಂದ ಸಾಯಂಕಾಲ 6-30 ರವರೆಗೆ ಮಾತ್ರ ನಡೆಸಬೇಕು. ಸರ್ಕಾರಿ ರಜೆ ದಿನಗಳಲ್ಲಿ ಮಳಿಗೆಯನ್ನು ತೆರೆಯತಕ್ಕದ್ದಲ್ಲ.

12. ಮಳಿಗೆ ಮಂಜೂರಾದವರು ಮಾಸಿಕ ಲೈಸನ್ಸ್ ಶುಲ್ಕವನ್ನು ಪ್ರತಿ ತಿಂಗಳ 10 ನೇ ತಾರೀಖಿನ ಒಳಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಗದಗ ಕಚೇರಿಯ ಲೆಕ್ಕಪತ್ರ ವಿಭಾಗದ ಶಿರಸ್ತೇದಾರರಲ್ಲಿ ಪಾವತಿಸತಕ್ಕದ್ದು.
13. ಮಳಿಗೆ ಮಂಜೂರಾದವರು ಮಳಿಗೆಯ ಕಟ್ಟಡದಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಕೂಡದು. ಮಳಿಗೆ ಅಥವಾ ಅದರ ಕಟ್ಟಡಕ್ಕೆ ಯಾವುದೇ ರೀತಿಯಲ್ಲಿ ಹಾನಿ ಮಾಡಿದರೆ ಅಥವಾ ಇನ್ನಿತರೆ ನಷ್ಟವಾದಲ್ಲಿ, ಅಂತಹ ನಷ್ಟ ಭರ್ತಿ ಹಣವನ್ನು ಅರ್ಜಿದಾರರ ಭದ್ರತಾ ಠೇವಣಿಯಿಂದ ಮುರಿದುಕೊಳ್ಳಲಾಗುವುದು.
14. ಮಳಿಗೆ ಮಂಜೂರಾದವರು ಗ್ರಾಹಕರಿಗೆ, ಸಾರ್ವಜನಿಕರಿಗೆ ಹಾಗೂ ಅಕ್ಕ ಪಕ್ಕದ ಮಳಿಗೆಯವರಿಗೆ ಯಾವುದೇ ರೀತಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಮತ್ತು ಶಬ್ದಮಾಲಿನ್ಯಕ್ಕೆ ಕಾರಣವಾಗುವ ವಸ್ತುಗಳನ್ನು ಬಳಸಬಾರದು.
15. ಮಳಿಗೆ ಮಂಜೂರಾದವರು ಮಳಿಗೆಯಲ್ಲಿ ಅಗತ್ಯ ಸುರಕ್ಷಾ ಕ್ರಮಗಳನ್ನು ಅವಶ್ಯವಾಗಿ ತಮ್ಮ ಕರ್ಚಿನಲ್ಲಿ ಅಳವಡಿಸಕೊಳ್ಳತಕ್ಕದ್ದು .
16. ಮಳಿಗೆ ಮಂಜೂರಾದವರು ಮಳಿಗೆ ಖಾಲಿ ಮಾಡುವಾಗ ಅವರ ಭದ್ರತಾ ಠೇವಣಿ ರೂ.10,000/- (ರೂ. ಹತ್ತು ಸಾವಿರ) ಮೊತ್ತವನ್ನು ಹಿಂದಿರುಗಿಸುವಾಗ ಅರ್ಜಿದಾರರಿಂದ ಹಣ ಬರಬೇಕಾದಲ್ಲಿ ವಿದ್ಯುತ್ ಬಿಲ್ಲಿನ ಮೊತ್ತ ಬಾಕಿ ಇದ್ದಲ್ಲಿ ಮೇಲಿನ ಠೇವಣಿಯ ಮೊತ್ತದಲ್ಲಿ ಮುರಿದುಕೊಳ್ಳಲಾಗುವುದು.
17. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಇವರಿಗೆ ಸ್ಥಳದ ಅವಶ್ಯಕತೆ ಕಂಡು ಬಂದಾಗ ಅವರು ನೋಟಿಸು ಕಳುಹಿಸಿದ 15 ದಿನಗಳೊಳಗಾಗಿ ಮಳಿಗೆ ಮಂಜೂರಾತಿ ಪಡೆದವರು ಮಳಿಗೆಯನ್ನು ಖಾಲಿ ಮಾಡಿಕೊಡತಕ್ಕದ್ದು.
18. ಮಳಿಗೆ ಮಂಜೂರಾತಿ ಪಡೆದವರು ಮಳಿಗೆ ಹಾಗೂ ನ್ಯಾಯಾಲಯದ ಆವರಣದಲ್ಲಿ ಯಾವುದೇ ವ್ಯಕ್ತಿಗಳಿಗೆ, ಆಸ್ತಿಗೆ ಹಾನಿಯುಂಟು ಮಾಡಬಲ್ಲ, ಅಗ್ನಿ ಸಂಭವಿಸಬಲ್ಲ, ಸಾರ್ವಜನಿಕರಿಗೆ ತೊಂದರೆ ನೀಡುವಂತಹ, ಉಪದ್ರವಕ್ಕೆ ಕಾರಣವಾಗುವ ಹಾಗೂ ಕಾನೂನಾತ್ಮಕವಾಗಿ ನಿಷೇಧಿಸಲಾದ ಯಾವುದೇ ವಸ್ತುಗಳನ್ನು ಶೇಖರಿಸಿಡಬಾರದು.
19. ಮಳಿಗೆ ಮಂಜೂರಾತಿ ಪಡೆದವರು ಈ ಮೇಲೆ ತಿಳಿಸಿದ ಕರಾರುಗಳನ್ನು ಉಲ್ಲಂಘಿಸಿದಲ್ಲಿ ಕೂಡಲೇ ಮಳಿಗೆ ಮಂಜೂರಾತಿಯ ಒಪ್ಪಂದ ಪತ್ರವನ್ನು, ಲೈಸನ್ಸ್‌ನ್ನು ರದ್ದು ಪಡಿಸಲಾಗುವುದು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ.

ಜಾವಕ ಸಂಖ್ಯೆ: /2021.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಗದಗ ದಿನಾಂಕ: 16 -03-2021.

ಪ್ರತಿಗಳು :

1. ಮಾನ್ಯ ಜಿಲ್ಲಾಧಿಕಾರಿಗಳವರ ಕಚೇರಿ, ಗದಗ
2. ಕಾರ್ಯಪಾಲಕ ಅಭಿಯಂತರರು, ಲೋ,ಬಂ ಮತ್ತು ಒಜಸಾ ಇಲಾಖೆ, ಗದಗ.
3. ಅಧ್ಯಕ್ಷರು, ಗದಗ ಜಿಲ್ಲಾ ವಕೀಲರ ಸಂಘ, ಗದಗ
4. ವಾರ್ತಾ ಮತ್ತು ಪ್ರಸಾರ ಇಲಾಖೆ, ಗದಗ
5. ತಹಶೀಲ್ದಾರ ಕಚೇರಿ, ಗದಗ
6. ತಾಲೂಕ ಪಂಚಾಯತ ಕಚೇರಿ, ಗದಗ
7. ಗದಗ ಬೆಟಗೇರಿ ಮುನ್ಸಿಪಲ್ ಕಾರ್ಪೊರೇಶನ, ಗದಗ

ಮಾಹಿತಿಗಾಗಿ ಹಾಗೂ ಸೂಚನಾ ಫಲಕಕ್ಕೆ.

ಮುಖ್ಯ ಆಡಳಿತಾಧಿಕಾರಿಗಳು,
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಗದಗ.